**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.434/2019</u>**

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ ಸುರೇಶ ತಂದೆ ಮಲಕಪ್ಪ ತಳವಾರ,
52 ವರ್ಷ, ಉಃ ಟ್ರಾಕ್ಟರ ಇಂಜಿನ್ ನಂ.08764
ನೇದ್ದರ ಚಾಲಕ ಮತ್ತು ಮಾಲೀಕ,
ವಾಸಃ ಶೀವಪೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-01 ಶ್ರೀಮತಿ ರಜಿಯಾಬೇಗಂ ಗಂಡ ಮಲೀಕ್ ಪಟೇಲ್ ಬಿರಾದಾರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 08.11.2018 ರಂದು ತಾನು, ಚಾಸಾ-4 ರವರಿಂದ ಹೇಳಿಕೆಯನ್ನು ಪಡೆದು, ಸದರಿ ಹೇಳಿಕೆಯ ಆಧಾರದ ಮೇಲೆ ತಮ್ಮ ಠಾಣೆಯ ಗುನ್ನೆ ನಂಬರ 22/2018ನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು, ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡು ಮಾಹಿತಿಯನ್ನು ಸಂಗ್ರಹಿಸಿರುತ್ತೇನೆಂದು ಹಾಗೂ ದಿನಾಂಕಃ 18.12.2018 ರಂದು ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-02 ಸುರೇಶ ತಂದೆ ಶಿವಯೋಗಪ್ಪ ಎ.ಎಸ್.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 18.01.2018 ರಂದು ತಾನು ಮತ್ತು ಚಾಸಾ-5 ರವರು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರಿಗೆ ಶಿವಪೂರ, ಬನ್ನಟ್ಟಿ ಗ್ರಾಮಗಳಲ್ಲಿ ಅಕ್ರಮವಾಗಿ ಮರಳು ವ್ಯವಹಾರ ಮಾಡುತ್ತಿದ್ದಾರೆಂದು ಬಾತ್ಮಿ ಬಂದಿದ್ದರಿಂದ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆಂದು ಹಾಗೂ ಅದರಂತೆ ತಾನು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದು ಸಮಯ 04-20ಕ್ಕೆ ತಾವು ಠಾಣೆಯಿಂದ ಬನ್ನಟ್ಟಿ ಗ್ರಾಮಕ್ಕೆ ಹೋಗಿ ಬನ್ನಟ್ಟಿ ಕ್ರಾಸ ಹತ್ತಿರ ತಮ್ಮ ಎದುರಿಗೆ ಒಂದು ಮರಳು ತುಂಬಿದ ಟ್ರಾಕ್ಟರ ಬರುತ್ತಿರುವುದು ಕಂಡುಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾವು ತಮ್ಮ ವಾಹನವನ್ನು ನಿಲ್ಲಿಸಿ ಆತನನ್ನು ಹಿಡಿಯಲು ಹೋಗುವಷ್ಟರಲ್ಲಿ ಟ್ರಾಕ್ಟರ ಚಾಲಕ ಸದರಿ ಆರೋಪಿ ಟ್ರಾಕ್ಟರ ಅನ್ನು ಬಿಟ್ಟು ಓಡಿ ಹೋಗಿರುತ್ತಾನೆಂದು ಹಾಗೂ ಬಿಟ್ಟು ಹೋದ ಟ್ರಾಕ್ಟರ್ ಅನ್ನು ಪರಿಶೀಲನೆ ಮಾಡಿ ನೋಡಿದಾಗ ಟ್ರಾಕ್ಟರ್ ಟ್ರಾ ಲಿಗೆ ನೊಂದಣಿ ಸಂಖ್ಯೆ ಇಲ್ಲದೆ ಇರುವುದು ಕಂಡುಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತದನಂತರ ಚಾಸಾ-1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ಟ್ರಾಕ್ಟರ ಮತ್ತು ಟ್ರಾ ಲಿಯನ್ನು ಜಪ್ತಿಪಡಿಸಿಕೊಂಡು 04-40 ರಿಂದ 5-40 ಗಂಟೆ ವರೆಗೆ ಜಪ್ತಿ ಪಂಚನಾಮೆಯನ್ನು ಬರೆದುಕೊಂಡು ನಂತರ ಸಮಯ ಸುಮಾರು 06-15 ಗಂಟೆಗೆ ಗುನ್ನೆ ಸ್ಥಳದಿಂದ ಹೊರಟು ಠಾಣೆಗೆ ಬಂದು ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿ, ಮರು ದಿನ ತಾನು ಈ ಕುರಿತು ಹೇಳಿಕೆಯನ್ನು ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-05 ಚಂದ್ರಕಾಂತ ತಂದೆ ಶರಣಪ್ಪ ಹೆಚ್.ಸಿ.301 ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 18.12.2018 ರಂದು ಚಾಸಾ-1 ರವರ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಆರೋಪಿ ಪತ್ತೆ ಕುರಿತು ತನಗೆ ನಿಯೋಜಿಸಿದ್ದು ಅದರಂತೆ ತಾನು ಶಿವಪೂರ, ಬನ್ನಟ್ಟಿ, ಹಿಂಚಗೇರಾ, ಘತ್ತರಗಾ ಗ್ರಾಮಗಳಿಗೆ ಭೇಟಿ ನೀಡಿ ಆರೋಪಿತನ ಕುರಿತು ವಿಚಾರಿಸಿದಾಗ ಸದರಿ ಆರೋಪಿತನು ಕಾಣಿಸಿಲ್ಲವೆಂದು ಹೇಳಿರುತ್ತಾರೆ. ಆರೋಪಿತನು ಕಾಣಿಸಿದಲ್ಲಿ ಸಾರ್ವಜನಿಕರಿಗೆ ಮತ್ತು ಭಾತ್ಮಿದಾರರಿಗೆ ಠಾಣೆಗೆ ತಿಳಿಸಿ ಎಂದು ಹಾಗೂ ಅದೇ ದಿನ ಠಾಣೆಗೆ ಬಂದು ವರದಿ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-7 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-8 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 14.01.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.